ಪ್ರಶ್ನೆ

ಅ. ಅಪೂರ್ಣಗೊಂಡ ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲ್ಲೂಕಿನ ಹೊಳೆಹೊನ್ನೂರು ಗ್ರಾಮವು ಗ್ರಾಮಾಂತರ ಪ್ರದೇಶವಾಗಿದ್ದು ಇಲ್ಲಿನ ಪ್ರಥಮ ದರ್ಜೆ ಕಾಲೇಜಿಗೆ ಎರಡು ಕೊಠಡಿಗಳ ಕೊರತೆ ಇರುವುದು ಸರ್ಕಾರ ಮನಗಂಡಿದೆಯೇ?

ಆ. ಹಾಗಿದ್ದಲ್ಲಿ ಸದರಿ ಕೊಠಡಿಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದೇ?

ಉತ್ತರ

ಅ. ಹೌದು.

ಆ. ಹೌದು.

ಸಿ.ಇ.ಟಿ ಮೂಲಕ ಉಚಿತ ಸೀಟು ಪಡೆದ ವಿದ್ಯಾರ್ಥಿಗಳಿಂದ ಸುಲಿಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1127(159)

ಸದಸ್ಯರ ಹೆಸರು: ಶ್ರೀ ಕಟ್ಟಾ ಸುಬ್ರಮಣ್ಯನಾಯ್ಡು(ಶಿವಾಜಿನಗರ)

ಉತ್ತರಿಸುವ ಸಚಿವರು: ಡಾ॥ ಜಿ.ಪರಮೇಶ್ವರ(ಉನ್ನತ ಶಿಕ್ಷಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು)

ಪ್ರಶ್ನೆ

1. 2001ನೇ ಸಾಲಿನಲ್ಲಿ ಸಿ.ಇ.ಟಿ.ಯಿಂದ ಎಷ್ಟು ವಿದ್ಯಾರ್ಥಿಗಳಿಗೆ ಇಂಜಿನಿಯರಿಂಗ್, ವೈದ್ಯಕೀಯ ಹಾಗೂ ದಂತ ವೈದ್ಯಕೀಯದ ಉಚಿತ ಸೀಟುಗಳನ್ನು ನೀಡಲಾಗಿದೆ?

2. ಉಚಿತ ಸೀಟು ಪಡೆದುಕೊಂಡ ವಿದ್ಯಾರ್ಥಿಗಳಿಂದ ಖಾಸಗಿ ಕಾಲೇಜುಗಳಲ್ಲಿ ಅರ್ಜಿ ಶುಲ್ಕ, ನೋಂದಣಿ ಶುಲ್ಕ, ಲ್ಯಾಬ್ ಶುಲ್ಕ, ಆಸ್ಪತ್ರೆ ಶುಲ್ಕ, ಹಾಸ್ಟಲ್ ಡಿಪಾಸಿಟ್ ಎಂದು ಲಕ್ಷಾಂತರ ರೂ.ಗಳನ್ನು ವಸೂಲು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

3. ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಉತ್ತರ

1. ಇಂಜಿನಿಯರಿಂಗ್ - 17993

   ವೈದ್ಯಕೀಯ - 1423

   ದಂತ ವೈದ್ಯಕೀಯ - 923

2. ಇಲ್ಲ.

3. ಉದ್ಭವಿಸುವುದಿಲ್ಲ.

ವಿಶ್ವೇಶ್ವರಯ್ಯ ತಾಂತ್ರಿಕ ವಿದ್ಯಾಲಯದ ಪ್ರಾದೇಶಿಕ ಕಛೇರಿಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1128(161)

ಸದಸ್ಯರ ಹೆಸರು: ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು(ಶಿವಾಜಿನಗರ)

ಉತ್ತರಿಸುವ ಸಚಿವರು: ಡಾ॥ ಜಿ.ಪರಮೇಶ್ವರ(ಉನ್ನತ ಶಿಕ್ಷಣ ಸಚಿವರು)

ಪ್ರಶ್ನೆ

ಅ) ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಮುಖ್ಯ ಆಡಳಿತ ಕಛೇರಿ ಎಲ್ಲಿದೆ?

ಆ) ಇದರ ಅಧೀನದಲ್ಲಿ ಎಷ್ಟು ಕಾಲೇಜುಗಳು ಬರುತ್ತವೆ?

ಇ) ಈ ವಿಶ್ವವಿದ್ಯಾಲಯಕ್ಕೆ ರಾಜ್ಯ ಸರ್ಕಾರ 2001-2002ನೇ ಸಾಲಿನಲ್ಲಿ ನೀಡಲಿರುವ ಅನುದಾನವೆಷ್ಟು?

ಈ) ಇದರ ಪ್ರಾದೇಶಿಕ ಕಛೇರಿಗಳನ್ನು ರಾಜ್ಯದ ವಿವಿಧ ಭಾಗಗಳಲ್ಲಿ ತೆರೆಯಲಾಗಿದೆಯೇ?

ಉ) ಇಲ್ಲದಿದ್ದಲ್ಲಿ, ಯಾವ ಯಾವ ಜಾಗದಲ್ಲಿ ಈ ವಿಶ್ವವಿದ್ಯಾಲಯದ ಪ್ರಾದೇಶಿಕ ಕಛೇರಿಯನ್ನು ತೆರೆಯಲಾಗುವುದು?

ಉತ್ತರ

ಅ) ಬೆಳಗಾಂ.